ಅನುಮಾನ ವ್ಯಕ್ತಪಡಿಸತಕ್ಕದ್ದು ಸೂಕ್ತವಲ್ಲವೆಂದು ಹೇಳಿ, ಇದನ್ನು ಈಗಾಗಲೇ ಆರ್ಡಿನೆನ್ಸ್ ಮೂಲಕ ನಾವು ಜಾರಿಕೊಟ್ಟು ಆಗಿದೆ. ಆದ್ದರಿಂದ ಇದನ್ನು ಪಾಸ್ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೇ .....

ಉಪಾಧ್ಯಕ್ಷರು : ನೀವು ಮಾತನಾಡಿದ್ದೀರಲ್ಲ?

ಶ್ರೀ ಎಸ್. ಸುರೇಶ್ ಕುಮಾರ್ : ಇವರು ಕ್ಲಾರಿಫಿಕೇಶನ್ ಕೊಟ್ಟಿದ್ದು ಸರಿಯಾಗಿದೆಯಾ ಸ್ವಾಮಿ?

(ಗೊಂದಲ)

ಉಪಾಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಈ ಕನ್ನಡ ಚಲನಚಿತ್ರಗಳಿಗೆ ಸಂಪೂರ್ಣ ಮನೋರಂಜನೆ ತೆರಿಗೆ ವಿನಾಯಿತಿ ಮತ್ತು ಕನ್ನಡೇತರ ಚಿತ್ರಗಳಿಗೆ ತೆರಿಗೆ ಹಾಕತಕ್ಕಂಥ ಉದ್ದೇಶ ಏನು? ಕನ್ನಡ ಚಿತ್ರಗಳಿಗೆ ಪ್ರೋತ್ಸಾಹ ಕೊಡಬೇಕು, ಅದಕ್ಕೋಸ್ಕರ ಈ ವಿನಾಯಿತಿ ಕೊಡಬೇಕೆಂದು ಮಾಡಿದ್ದು. ಇಷ್ಟು ವಿನಾಯಿತಿ ಇದ್ದಾಗ ಕನ್ನಡ ಚಿತ್ರರಂಗ ನಡೆಯುತ್ತಿತ್ತು. ಈಗ ಮಾನ್ಯ ಸಚಿವರು ಹೇಳುತ್ತಿದ್ದಾರೆ ಚಲನಚಿತ್ರಮಂದಿರಗಳ ಸ್ಥಿತಿ ಶೋಚನೀಯವಾಗಿದೆ, ಅವರದ್ದು ದುಸ್ಥಿತಿಯಾಗಿದೆ ಎಂದು. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಮೇಲೆ ಅವರಿಗೆ ಕಾರ್ಮಿಕರ ಬಗ್ಗೆ ನೆನಪು ಬಂದಿತು. ಇಷ್ಟೆಲ್ಲ ಎನ್‌ಕರೇಜ್‌ಮೆಂಟ್ ಇದ್ದಾಗ ನಾವು ವಿನಾಯ್ತಿ ಕೊಡುತ್ತೇವೆ ಎಂದಾಗ ಚಲನಚಿತ್ರ ಮಂದಿರಗಳು ಕನ್ನಡ ಚಿತ್ರಗಳನ್ನು ಏಕೆ ಪ್ರದರ್ಶಿಸುತ್ತಿಲ್ಲ? ಇದು ಈಗ ಪ್ರಶ್ನೆ ಇರುವುದು. ನಾವು ಕನ್ನಡೇತರ ಚಿತ್ರಗಳನ್ನೇ ಪ್ರದರ್ಶಿಸುತ್ತೇವೆ, ಹಾಗಾಗಿ ನಮಗೆ 100 ಪರ್ಸೆಂಟ್ ಕೊಡುವುದಕ್ಕೆ ಆಗುವುದಿಲ್ಲ ಎಂದು ಅವರು ಹೇಳಿದರೆ, ನೀವು 80 ಪರ್ಸೆಂಟ್ ಕೊಡಿ ಎಂದರೆ ಇದು ಅವರ ಒಂದು ಒತ್ತಡಕ್ಕೆ ನೀವು ಒಳಗಾಗಿದ್ದೀರಿ ಎಂದು ಹೇಳಬೇಕಾಗುತ್ತದೆ. ಜನರು ದುಡ್ಡು ಕೊಟ್ಟು ನೋಡುತ್ತಾರೆ. ಇಲ್ಲದಿದ್ದರೆ 100 ಪರ್ಸೆಂಟ್ ಇರುವುದನ್ನು ತೆಗೆದುಬಿಡಿ. ಅದಕ್ಕೋಸ್ಕರ ನಾನು ಮತ್ತೆ ಹೇಳುತ್ತಿದ್ದೇನೆ, ನೀವು ಸುಗ್ರೀವಾಜ್ಞೆ ಮೂಲಕ ತಂದುಬಿಟ್ಟಿದ್ದೇವೆ ಎಂದು ಹೇಳುತ್ತೀರಿ. ಸುಗ್ರೀವಾಜ್ಞೆ ತರುವಾಗ ನಿಮಗೆ ಬುದ್ಧಿ ಹೇಳುವವರು ಯಾರೂ ಇರಲಿಲ್ಲ, ಸದನ ಇರಲಿಲ್ಲ. ಬುದ್ಧಿ ಹೇಳುವವರು ಇಲ್ಲದೇ ಇರುವುದರಿಂದ ಸುಗ್ರೀವಾಜ್ಞೆಯನ್ನು ತಂದುಬಿಟ್ಟಿದ್ದೀರಿ. ಅದಕ್ಕೋಸ್ಕರ ಈಗಲೂ ಕೂಡ ನಾನು ಹೇಳುತ್ತಿದ್ದೇನೆ. This is an amendment to the Money Bill. ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳುವುದು ಬೇಡ. ಏಕೆಂದರೆ ಅದರದ್ದೇ ಆದ sanctity and secrecy ಅದಕ್ಕೆ ಇದೆ. ಮೂರು ತಿಂಗಳು ನಾವು ಆರಾಮವಾಗಿ ಇರೋಣ. ಮೂರು ತಿಂಗಳು ಆದ ಮೇಲೆ ಹೊಸ ಬಜೆಟ್ ಏನು ಮಾಡುತ್ತೀರಿ, ಅದರಲ್ಲಿ ಬೇಕಾದರೆ 80 ಪರ್ಸೆಂಟ್ ಅಲ್ಲ, 50 ಪರ್ಸೆಂಟ್ ಬೇಕಾದರೂ ಮಾಡಿಕೊಳ್ಳಿ. ಆದರೆ ಈಗ ಮಾಡುತ್ತಿರುವುದು ಮಾತ್ರ ಬಹಳ ದೊಡ್ಡ ಅಕ್ಷಮ್ಯ ಅಪರಾಧ. ನೀವು ಸರ್ಕಾರದಲ್ಲಿ ಇರುವವರು ಈ ಕೆಲಸ ಮಾಡುವುದರಿಂದ ಇದು ಅನುಮಾನಕ್ಕೆ ಆಸ್ಪದವಾಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾವು ಇಷ್ಟೆಲ್ಲ ಹೇಳಿದಮೇಲೂ ಮಾನ್ಯ ಮಂತ್ರಿಗಳು ಕಣ್ಣು ತೆರೆಯಲಿಲ್ಲ, ಸರ್ಕಾರ ಕಣ್ಣು ತೆರೆಯಲಿಲ್ಲ. ಈ ಸರ್ಕಾರ ಯಾವ ಕಡೆಗೆ ವಾಲುತ್ತಿದೆ ಎಂದರೆ ಹಿಂದೆ ಹೆಂಡದ ದೊರೆಗಳಿಗೆ ಕೋಟ್ಯಾಂತರ ರೂಪಾಯಿ ರಿಯಾಯ್ತಿ ಕೊಟ್ಟರು. ಇವತ್ತು ಐದು ಕೋಟಿ ಎಂದು ಅವರ ಬಾಯಿಯಿಂದ ಬರುತ್ತಿದೆ. 5 ಕೋಟಿ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ಕಡಿಮೆಯಾಗುತ್ತದೆ ಎಂದರೆ ಸರ್ಕಾರ ಯಾವ ಕಡೆಗೆ ಹೋಗುತ್ತಿದೆ ಎಂದು ನಾವು ನೋಡಬಹುದು. ಈ ಕಡೆ ರೈತರಿಗೆ ವಿನಾಯ್ತಿ ಕೊಡಿ ಎಂದರೆ, ಅಡಿಕೆ ಬೆಳೆಗಾರರಿಗೆ ಟ್ಯಾಕ್ಸ್ ಕಡಿಮೆ ಮಾಡಿಯೆಂದರೆ ಇವರು ಒಪ್ಪುತ್ತಿಲ್ಲ. ಆದ್ದರಿಂದ ನೀವು ಯಾವ ಕಡೆಗೆ ಹೋಗುತ್ತಿದ್ದೀರಿ. ಯಾವ ವರ್ಗದ ಕಡೆಗೆ ಹೋಗುತ್ತಿದ್ದೀರಿ ಎಂದು ಇದರ ಮೇಲೆ ಗೊತ್ತಾಗುತ್ತದೆ. ಇಷ್ಟು ತಿಳುವಳಿಕೆ ಹೇಳಿದಮೇಲೂ, ಬುದ್ಧಿ ಹೇಳಿದ ಮೇಲೂ ಇವರು ವಿತ್‌ಡ್ರಾ ಮಾಡುವುದಕ್ಕೆ ತಯಾರಿಲ್ಲ. ಆದ್ದರಿಂದ ಸರ್ಕಾರದ ಈ ನೀತಿಯನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಬಿ.ಜೆ.ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, 2000ನೇ ಸಾಲಿನ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4ರ ವರೆಗೆ :

ಉಪಾಧ್ಯಕ್ಷರು : "ಖಂಡ 2 ರಿಂದ 4ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರ ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ :

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)